**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.1009/2021**

**CW- 23** **PW:2**

| | |
|---|---|
| ಸಾಕ್ಷಿಯ ಹೆಸರು | ಃ ಗುರು ಬಿ ಮತ್ತೂರು |
| ತಂದೆ /ಗಂಡನ ಹೆಸರು | ಃ ಬಸವಣ್ಯೆಪ್ಪ |
| ವಯಸ್ಸು | ಃ 62 ವರ್ಷ |
| ಉದ್ಯೋಗ | ಃ ನಿವೃತ್ತ ಎಸ್ ಪಿ |
| ವಾಸಸ್ಥಳ | ಃ ಧಾರವಾಡ. |

ದಿಃ **21.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಜುಲೈ 2011 ರಿಂದ ಸೆಪ್ಟಂಬರ್ 2013 ರವರೆಗೆ ನಾನು ವಿದ್ಯಾಗಿರಿ ಪೊಲೀಸ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿತರು ಕರೆದುಕೊಂಡ ಹೋಗಿ ತೋರಿಸಿದ ಸ್ಥಳದಿಂದ ಒಂದು ಲೇನೆವಾ ಕಂಪನಿಯ ಲ್ಯಾಪಟ್ಯಾಪ್, ವಿವಿಧ ಕಂಪನಿಯ 7 ಸಿ ಪಿ ಯು ಗಳು, ವಿವಿಧ ಕಂಪನಿಯ 7 ಮಾನಿಟರಗಳು, ಒಂದು ಸ್ಯಾಮಸಂಗ್ ಎಲ್ ಸಿ ಡಿ ಟಿ ವಿ , ಒಂದು ರೇಕ್ಷಿನ್ ಬ್ಯಾಗ , ಬ್ಯಾಗನಲ್ಲಿ ಇದ್ದ ಎರಡು ಕಬ್ಬಿಣದ ಸರಳುಗಳು, ಎರಡು ಸ್ಕ್ರೂರ ಡ್ರೈವರ್ ಗಳು , ಒಂದು ಬ್ಯಾಟರಿ, ಒಂದು ಚಾಕ್ಲೇಟ್ ಬಣ್ಣದ ಪ್ಯಾಂಟ್ , ಒಂದು ಆಪ. ತೋಳಿನ ಚೆಕ್ಸ ಶರ್ಟ , ಒಂದು ಉಲ್ಲನ್ ಸ್ಕ್ಯಾರಫ್, ಒಂದು ಗುಲಾಬಿ ಬಣ್ಣದ ಟೋಪಿ ಇವುಗಳನ್ನು ಪಂಚರ ಸಮಕ್ಷಮ ಹುಬ್ಬಳ್ಳಿಯ ಸಿದ್ದರಾಮ ರೆಸಿಡೆನ್ಸಿಯಲ್ಲಿ 1 ನೇ ಆರೋಪಿಯು ವಾಸವಾಗಿದ್ದ ರೂಮಿನಿಂದ ದಿಃ 30.05.2023 ರಂದು ಜಪ್ತಿ ಮಾಡಿಕೊಂಡಿದ್ದು ಆ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

1 ನೇ ಆರೋಪಿಯು ಸಿದ್ದರಾಮ ರೆಸಿಡೆನ್ಸಿಯ ಕೆಳಗೆ ಇರುವ ಸಂತೃಪ್ತಿ ಹೋಟಲ್ ನಲ್ಲಿ ಒಂದು ಸೋನಿ ಕಂಪನಿಯ ಎಲ್ ಸಿ ಡಿ ಟಿ ವಿ ಯನ್ನು ಚಂದ್ರಶೇಖರ ಸಾಲಿ ಅವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದರು. ಸದರಿ ಚಂದ್ರಶೇಖರ ಸಾಲಿ ಅವರು ತಂದು ಹಾಜರುಪಡಿಸಿದ ಟಿ ವಿ ಯನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಆರೋಪಿತರಿಬ್ಬರನ್ನು ತಾವು ಕಳುವು ಮಾಡಿದ ಇನ್ನೂ ಕೆಲವು ವಸ್ತುಗಳನ್ನು ಒಬ್ಬ ವ್ಯಕ್ತಿಗೆ ಕೊಟ್ಟಿದ್ದು ಹುಬ್ಬಳಿಯ ಕಾಳಮ್ಮನ ಅಗಸಿಯಲ್ಲಿ ಇರುವ ಕೆ-ಟೆಕ್ ಸೆಕ್ಯೂರಿಟಿ ಸಿಸ್ಟಮ ಮಾಲಿಕರಿಗೆ ಕೊಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ನಂತರ ಪಂಚರು ಮತ್ತು ಸಿಬ್ಬಂದಿಯ ಜೊತೆ ಆರೋಪಿತರು ಕರೆದುಕೊಂಡ ಹೋಗಿ ತೋರಿಸಿದ ಸ್ಥಳಕ್ಕೆ

ಹೋಗಿ ಕಾಳಮ್ಮನ ಅಗಸಿಯಲ್ಲಿ ಇರುವ ಕೆ-ಟೆಕ್ ಸೆಕ್ಯೂರಿಟಿ ಸಿಸ್ಟಮ ನ ಕಚೇರಿಯ ಒಳಗೆ ಹೋಗಿ ಆರೋಪಿತರು ಅಲ್ಲಿ ಇದ್ದ ಒಬ್ಬ ವ್ಯಕ್ತಿಯನ್ನು ತೋರಿಸಿ ಸದರಿ ವ್ಯಕ್ತಿಗೆ ಮಾನಿಟರ್ ಮತ್ತು ಸಿ ಪಿ ಯು ಮಾರಾಟ ಮಾಡಿರುವುದಾಗಿ ತಿಳಿಸಿದರು. ನಾವು ಸದರಿ ವ್ಯಕ್ತಿಯ ಹೆಸರನ್ನು ಕೇಳಿದಾಗ ಆತನ ಹೆಸರು ಕಿರಣ್ ಶಂಕರ ಸಾ ಕೋಡೇ ಎಂದು ತಿಳಿಸಿರುತ್ತಾರೆ. ಕಿರಣ್ ಶಂಕರ ಸಾ ಕೋಡೇ ಅವರನ್ನು ವಿಚಾರಿಸಲಾಗಿ ಆತನುಇಬ್ಬರು ಆರೋಪಿತರಿಂದ ಪಡೆದ ವಸ್ತುಗಳನ್ನು ಕಚೇರಿಯಲ್ಲಿಯೇ ಇಟ್ಟಿದ್ದು ಇನ್ನೂ ಕೆಲವು ಸಿ ಪಿ ಯು ಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದು ಇನ್ನೂ ಕೆಲವು ವಸ್ತುಗಳನ್ನು ಬೇರೆ ಕಡೆ ಬಚ್ಚಿಟ್ಟಿರುವುದಾಗಿ ತಿಳಿಸಿರುತ್ತಾರೆ. ಕಿರಣ್ ಶಂಕರ ಸಾ ಕೋಡೇ ಅವರು ಕಚೇರಿಯಲ್ಲಿ ಇಟ್ಟಿದ್ದ ವಸ್ತುಗಳನ್ನು ಒಂದೂಂದು ತೆಗೆದುಕೊಟ್ಟ ಮೇರೆಗೆ 13 ಸಿ ಪಿ ಯು ಗಳು ವಿವಿಧ ಕಂಪನಿಯ ಮಾನಿಟರಗಳು, ಎರಡು ಲೇನೇವಾ ಕಂಪನಿಯ ಡಸ್ಕಟಾಪ್ ಮಾನಿಟರಗಳು, ಒಂದು ಮ್ಯಾಕ್ಸೇಲ ನೋಟು ಎಣಿಸುವ ಮೆಷಿನ್, ಕಿರಣ್ ಶಂಕರ ಸಾ ಕೋಡೇ ಅವರ ಜೇಬಿನಿಂದ ಐ ಫೋನ್ ಕಂಪನಿಯ ಮೊಬೈಲ್ ಹ್ಯಾಂಡ್ ಸೆಟ್ ಇದ್ದು ವೋಡಾ ಫೋನ್ ಸಿಮ್ ಇತ್ತು. ಕಿರಣ್ ಶಂಕರ ಸಾ ಕೋಡೇ ಅವರಿಂದ ಕೃತ್ಯಕ್ಕೆ ಬಳಸಿದ ಮೋಟಾರ ಸೈಕಲ್ ನ್ನು ಪಂಚರ ಸಮಕ್ಷಮ ಜಪ್ತುಪಡಿಸಿ ಅಮಾನತುಪಡಿಸಿಕೊಂಡಿರುತ್ತೇನೆ.

ನಂತರ ಕಿರಣ್ ಶಂಕರ ಸಾ ಕೋಡೇ ಈತನ್ನು ನಮ್ಮನ್ನು ನ್ಯೂ ಇಂಗ್ಲೀಷ್ ಸ್ಕೂಲ್ ಗೆ ಕರೆದುಕೊಂಡು ಹೋಗಿ ಒಂದು ಅಂಗಡಿಯ ಮುಂದೆ ನಮ್ಮ ಜೀಪನ್ನು ನಿಲ್ಲಿಸಲು ಹೇಳಿದ್ದು ಅಲ್ಲಿ ಕಿರಣ್ ಶಂಕರ ಸಾ ಕೋಡೇ ಈತನು ಹಾರ್ಡ ಟೆಕ್ ಸಿಸ್ಟಮ ಸೇಲ್ಸ ಆಂಡ್ ಸರ್ವಿಸ್ ಅಂಗಡಿಯ ಮುಂದೆ ನಿಲ್ಲಿಸಿ ಬಾಗಿಲು ಹಾಕಿದ್ದ ಒಪಬ್ಬ ಹುಡುಗನನ್ನು ಕರೆಯಿಸಿ ಸದರಿ ಹುಡುಗನ ಹೆಸರು ಮೊಹಮದ್ದ ಆರೀಫ್ ಪಾಷ ಎಂದು ತಿಳಿಸಿದ್ದು ನಾವು ಆತನನ್ನು ವಿಚಾರ ಮಾಡಿ ಹೇಳಿಕೆ ಪಡೆದುಕೊಂಡೆವು. ಆತನು ಕಿರಣ್ ಶಂಕರ ಸಾ ಕೋಡೇ ಯಿಂದ ಕೆಲವು ದಿನಗಳ ಹಿಂದೆ ಕಂಪ್ಯೂಟರ್ ಮತ್ತು ಸಿ ಪಿ ಯು ಗಳನ್ನು ಖರೀದಿಸಿದ್ದಾಗ ತಿಳಿಸಿದ್ದು, ಒಂದು ಎ ಓ ಸಿ ಕಂಪನಿಯ ಕಂಪ್ಯೂಟರ್, ವಿವಿಧ ಕಂಪನಿಯ 5 ಸಿ ಪಿ ಯು ಗಳ, ಹಾಗೂ ಆತನ ಕಿಸೆ ಯಲ್ಲಿ ಇದ್ದ ವೋಡಾ ಫೋನ್ ಮತ್ತು ಡೋಕೋಮ ಸಿಮ ಅಳವಡಿಸಿದ್ದ ಸ್ಯಾಮಸಂಗ್ ಮೊಬೈಲನ್ನು ಹೊರತುಪಡಿಸಿ ಮಾನಿಟರ್ ಮತ್ತು ಸಿ ಪಿ ಯು ಗಳನ್ನು ಕಿರಣ್ ಶಂಕರ ಸಾ ಕೋಡೇ ಯಿಂದ ಖರೀದಿಸಿದ್ದು ಎಂದು ತಿಳಿಸಿರುತ್ತಾರೆ ನಂತರ ಪಂಚರ ಸಮಕ್ಷಮ ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಪಂಚರ ಸಮಕ್ಷಮ ಆರೋಪಿತರನ್ನು ಕರೆತಂದು ದಸ್ತಾಗಿರಿ ನಿಯಾಮವಳಿಗಳನ್ನು ಪಾಲಿಸಿ ಆತನನ್ನು ಠಾಣೆಯಲ್ಲಿ ಇರಿಸಿದ್ದೆವು.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಗಳಲ್ಲಿ ಮೇಲೆ ಹೇಳಿದ ವಸ್ತುಗಳನ್ನು ಕಳುವು ಮಾಡಲು

ಉಪಯೋಗಿಸಿದ ವಾಹನವನ್ನು ಬೆಳಗಾವಿಯ ಮುಬರಾಕ್ ಶೆಹ್ ಅವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ ಮೇರೆಗೆ ದಿನಾಂಕ 30.08.2013 ರಂದು ಬೆಳಗಿನ ಜಾವ 4.30 ಕ್ಕೆ ಠಾಣಾ ಸಿಬ್ಬಂದಿಯಾದ ಪೂಜೇರಿ, ಪಿಸಿ ನಂಃ 2118, ಪಿಸಿ ನಂಃ 1959 ರನ್ನು ಬೆಳಗಾವಿಗೆ ಕಳುಹಿಸಿರುತ್ತೇನೆ. ನಂತರ ಸದರಿ ಸಿಬ್ಬಂದಿಗಳು ಬೆಳಗಾವಿಯಿಂದ ಫೋರ್ಡ ಕಂಪನಿಯ ಐ-ಕಾನ್ ಕಾರು ಮತ್ತು ಟಾಟ ಎ ಸಿ ಗೂಡ್ಸ ವಾಹನ ಮತ್ತು ಮುಬಾರಕ್ ಶೇಖ್ ಈತನ ಸ್ಯಾಮಸಂಗ್ ಕಂಪನಿಯ ಮೊಬೈಲ್ ಹ್ಯಾಂಡ ಸೆಟ್ ನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಮೊಬೈಲ್ ಹ್ಯಾಂಡಸೆಟ್ ಸಿಸಿ ನಂ.484/2015 ರಲ್ಲಿ ಮು ಮಾ 1 ಅಂತಾ ಗುರುತಿಸಿದ್ದು ಇದು ವಿಭಜಿತ ಪ್ರಕರಣ ಆಗಿರುವುದರಿಂದ ಇದರಲ್ಲಿಯೂ ಸಹ ಮೊಬೈಲ್ ಹ್ಯಾಂಡಸೆಟನ್ನು ನೋಡಿ ಮು ಮಾ 1 ಎಂದು ಗುರುತಿಸಲಾಯಿತು.

ದಿನಾಂಕ 03.09.2013 ರಂದು ಎ ಪಿ ಎಂ ಸಿನವನಗರ ಪೊ ಠಾ ಯ ಪಿ ಐ ಅವರಿಗೆ ಅವರ ಠಾಣೆಗೆ ಸಂಬಂದಿಸಿದಂತೆ ಕ್ರೈಂ ನಂಃ99/2013 ಮತ್ತು 120/2013 ಗೆ ಸಂಬಂದಿಸಿದಂತೆ 5 ಜನರು ಬಂದಿಸಿರುವುದಾಗಿ ತಿಳಿಸಿ ಒಂದು ಇ-ಮೇಲ್ ಸಂದೇಶ ಕಳುಹಿಸಿರುತ್ತೇನೆ. ನನ್ನ ಜೊತೆ ಎಲ್ಲಾ ಪ್ರಕರಣಗಳಲ್ಲಿ ತನಿಖೆಗೆ ಸಹಕರಿಸಿದ ಮತ್ತು ಈ ಕೇಸಿಗೆ ಸಂಬಂದಿಸಿದ ಸಿಬ್ಬಂದಿಗಳ ಹೇಳಿಕೆಗಳನ್ನುಪಡೆದುಕೊಂಡಿರುತ್ತೇನೆ.

ದಿನಾಂಕ 13.09.2013 ರಂದು 3 ನೇ ಅಧಿಕ ಸಿಜೆ ಎಂ ನ್ಯಾಯಾಲಯದಿಂದ ಅನುಮತಿಯನ್ನು ಈ ಪ್ರಕರಣಕ್ಕೆ ಸಂಬಂದಿಸಿದ ವಸ್ತುಗಳನ್ನು ವರ್ಗಾಯಿಸಲು ಅನುಮತಿ ಕೋರಿ ಪತ್ರವನ್ನು ಬರೆದಿರುತ್ತೇನೆ. ಪಂಚಾನಾಮೆಯ ಸಮಯಕ್ಕೆ ಅಮಾನತುಪಡಿಸಿಕೊಂಡ ವಸ್ತುಗಳ ಛಾಯ ಚಿತ್ರವನ್ನು ತೆಗೆಯಿಸಿರುತ್ತೇನೆ. ದಿನಾಂಕ 26.09.2013 ರಲ್ಲಿ ನನಗೆ ವರ್ಗಾವಣೆಯಾದ ಕಾರಣ ಪಿ ಎಸ್ ಐ ಪೂಜೇರಿ ಅವರಿಗೆ ಕಡತವನ್ನು ಮುಂದಿನ ತನಿಖೆಗಾಗಿ ವರ್ಗಾವಯಿಸಿರುತ್ತೇನೆ. ಆರೋಪಿ ಇವರು ತಲೆಮರಿಸಿಕೊಂಡಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ತಲೆಮರಿಸಿಕೊಂಡಿದ್ದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.